



ತಿನ್ನುವ ಆಸಾಮಿ ಇವನು. ತಲೆಚಿಟ್ಟು ಹಿಡಿಸುವಷ್ಟು ಕೊರೆಯುತ್ತಾನೆ. ಜೊತೆಗೆ ರೇಜಿಗೆ ಗಿರಾಕಿ. ಆಗ ನಾನಲ್ಲಿ ಕ್ಯಾಮೆರಾ ಕೀಲಿಸಿ ಬಾರ್ ಹೆಡೆಡ್ ಗೀಸ್ ಎಂಬ ವಲಸೆ ಪಕ್ಷಿಯ ಚಿತ್ರ ತೆಗೆಯಲು ಚಡಪಡಿಸುತ್ತಿದ್ದೆ. ಆ ಹಕ್ಕಿಯ ಚಿತ್ರ ನಾನಂದುಕೊಂಡಂತೆ ಸಿಕ್ಕಿಲ್ಲವಲ್ಲ ಎಂಬ ಸಂಕಟ ಕಾಡುತ್ತಿತ್ತು. ಆ ಊರಿಗೆ ನೆಂಟರ ಮನೆ ಬಾಡೂಟಕ್ಕೆ ಬಂದಿದ್ದ ಚಂದ್ರ ನನ್ನ ಪತ್ತೆ ಹಚ್ಚಿದ್ದ. ಕೆರೆ ಕಡೆ ಯಾವ ಕೆಲಸಕ್ಕೆ ಬಂದಿದ್ದನೋ? ಅದೂ ತಿಳಿಯದು. ನನಗೆ ಇರಿಸುಮುರಿಸು ಆಗಿದ್ದಂತೂ ನಿಜ.

ನಾನಾಗ ತೀರಾ ಕೆಟ್ಟ ಅವಸ್ಥೆಯಲ್ಲಿದ್ದೆ. ಕೆರೆ ಬದಿಯಲ್ಲಿ ಕೂತೆದ್ದು ಮೈಕೈ, ಪ್ಯಾಂಟೆಲ್ಲವೂ ಕೆಸರಾಗಿತ್ತು. ಬೆಳಗ್ಗೆ ನಾಲ್ಕು ಗಂಟೆಗೇ ಎದ್ದೋಡಿ ಬಂದ ಕಾರಣ ನಿದ್ದೆ ಮಂಪರು ಎಳೆತಿತ್ತು. ಬಿಸಿಲೇರಿ ಸಮಯ ಮೀರಿ ಹಸಿವೂ, ಆಯಾಸವೂ ತಳತಳಿಸಿತ್ತು. ಇಂಥ ಸಂದಿಗ್ಧ ಸಮಯದಲ್ಲಿ ಶನಿ ಶನಿ ಅಂತ ಈ ಚಂದ್ರು ಸಿಕ್ಕಿದ್ದ. ಗೆಳೆಯ ಸಿಕ್ಕ ಎಂಬ ಖುಷಿ ಒತ್ತಟ್ಟಿಗಿದ್ದರೂ ಅದು ಸೂಕ್ತ ಸಮಯವಾಗಿರಲಿಲ್ಲ. ಮೇಲಾಗಿ ನನ್ನ ಫೋಟೊಗ್ರಫಿ ಹವ್ಯಾಸವನ್ನು ಅಪಹಾಸ್ಯ ಮಾಡಿ ನಗುವ ಪೈಕಿ ಇವನೂ ಒಬ್ಬ ಎಂಬುದು ನೆನಪಾಗಿ ಸಿಟ್ಟು ಉಕ್ಕಿತು. 'ಥೂ ಹಾಳಾಗಿ ಹೋಗಿತೆ ಲೌಡಿ ಗಂಡಂದು. ಕಾಲೇಜಲಿದ್ದು ಹುಡುಗ್ರಿಗೆ ಓದಿಸೋದು ಬಿಟ್ಟು ಕೆಪರನಂಗೆ ಕಾಡು, ಸ್ಮಶಾನ, ಹಳ್ಳಕೊಳ್ಳ ಅಂತೆಲ್ಲಾ ಕರಿಡಬ್ಬಿ ನೇತಾಕ್ಕೊಂಡು ಅಲಿಯುತ್ತೆ' ಎಂದೆಲ್ಲಾ ಗೆಳೆಯರ ಎದುರು ವಾಲಗ ಊದಿದ್ದವನು. ಊರಲ್ಲಿ ಇವನ ಕಣ್ಣಿಗೆ ಬೀಳದೆ ಓಡಾಡುವ ನಾನಿವತ್ತು ಸಿಕ್ಕಿ ಬಿದ್ದಿದ್ದೆ. ಅವನ ಜೊತೆ ಇನ್ನಿಬ್ಬರು ಇದ್ದ ಕಾರಣ ಒಳಗಿದ್ದ ಕೋಪ ಸಿಡುಕು ಪ್ರಕಟಿಸದೆ ಪೆಚ್ಚಾಗಿ ನಕ್ಕೆ. ನನ್ನ ಕಡೆ ಆ ಹಕ್ಕಿಗಳು ಖಂಡಿತಾ ಹಾರಿ ಬರಬಹುದೆಂದು ನಿರೀಕ್ಷಿಸಿ ಆಯಕಟ್ಟಿನ ಜಾಗದಲ್ಲಿ ಕೂತಿದ್ದ ನಾನು ಎಲ್ಲಾ ಕೊಡವಿಕೊಂಡು ಎದ್ದು ನಿಲ್ಲಬೇಕಾಯಿತು.

ಅಲ್ಲೇ ನಮ್ಮಿಬ್ಬರ ಮಾತುಕತೆ ಇಷ್ಟವಿಲ್ಲದೆ ಶುರುವಾಯಿತು. 'ಏನಿಲ್ಲಿ' ಎಂದ, 'ಚೀನಾ ದೇಶದಿಂದ ವಲಸೆ ಬಂದಿರೋ ಪಕ್ಷಿ ಚಿತ್ರ ತೆಗೀತಾ ಇದ್ದೀನಿ' ಎಂದೆ. 'ಯಾವು ಆ ದಪ್ಪ ತಲೆ ಬಾತುಕೋಳಿನಾ' ಎಂದು ಸಿಂಡರಿಸಿ ಕೇಳಿದ. 'ಹ್ಞೂ… ಕಣೋ' ನನ್ನುತ್ತರ. 'ನಿಂಗ್ಯಾವ ದರವೇಷಿ ನನ್ಮಗ ಹೇಳಿದ್ದು ಚೈನಾದಿಂದ ಬಂದಾವೇಂತ?' ವ್ಯಂಗ್ಯವಾಗಿ ನುಡಿದ. 'ನಾನು ಓದಿ, ಕೇಳಿ ತಿಳ್ಕಂಡಿದ್ದೀನಿ', 'ಓಹೋ! ಇಲ್ಲಿಗಂಟ ಏನುದ್ದೇಶ ಇಟ್ಕಂಡ್ ಬಂದಾವಂತೆ' ಮತ್ತೆ ತಗಾದೆ. 'ನಿನ್ನಂಗೆ ಬಿಟ್ಟಿ ಊಟ ಹುಡ್ಕೊಂಡು ಊರೂರು ಸುತ್ತೋ ಶೋಕಿ ಅವುಕ್ಕೆ' ಎಂದೆ. 'ಅಲ್ಲಲೇ..ನಂಗ್ ಬೀಗರೂಟ ಇತ್ತು ಕರೆಯೋಲೆ ಇತ್ತು ಬಂದಿದ್ದೆ. ಆದ್ರೆ ಇವುಕ್ಕೆ ಈ ಕೆರೇಗೆ ಬರ್ರಪ್ಪಾಂತ ಯಾವ ಬಿಕನಾಸಿ